# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/458/12-13

ದಿನಾಂಕ :26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಸಂಗಾಲು ಮಾರೆಮ್ಮ ಗಂಡ ಸಂಗಾಲು ತಿಮ್ಮಪ್ಪ, ಬಿಸಿಲಹಳ್ಳಿ ಗ್ರಾಮ, ಬಳ್ಳಾರಿ ತಾಲ್ಲೂಕು<br><br>(ಶ್ರೀ ಬಿ. ವೀರಣ್ಣ, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಬಳ್ಳಾರಿ<br>(2) ಕಂದಾಯ ನಿರೀಕ್ಷಕರು, ಬಳ್ಳಾರಿ<br>(3) ಗ್ರಾಮಲೆಕ್ಕಾಧಿಕಾರಿಗಳು, ಬಿಸಿಲಹಳ್ಳಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಿಸಿಲಹಳ್ಳಿ | 37/ಎ/1 | 0.03.78 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 54/04-05 ದಿನಾಂಕ 10-12-2004 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 30-10-2015, ಮತ್ತು 26-08-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 26-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಬಿಸಿಲಹಳ್ಳಿ ಗ್ರಾಮದ ಸ.ನಂ 37/ಎ/1 ವಿಸ್ತೀರ್ಣ: 0.03.78 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 54/04-05 ದಿನಾಂಕ 10/12/2004 ರನ್ನು ರದ್ದುಪಡಿಸುವಂತೆ ಕೋರಿರುತ್ತಾರೆ.

ವಾದಿಗಳು ಸದರಿ ಜಮೀನನ್ನು ಟಿ.ಮೆಹಬೂಬ್ ಬಾಷ ತಂದೆ ಲೇಟ್ ಟಿ.ಮೋದಿನ್ ಸಾಬ್ ಇವರಿಂದ ನೊಂದಾಯಿತ ಕ್ರಯ ಪತ್ರ 5112/04-05 ದಿನಾಂಕ 17-09-2004 ರಂದು ಖರೀದಿಸಿದ್ದು, ಪಹಣಿಯಲ್ಲಿನ ಹಕ್ಕುದಾಖಲಿಸುವ ಕುರಿತಂತೆ ಕಲಂ ನಂ 09 ರಲ್ಲಿ ಸಂಗನಕಲ್ಲು ಮಾರೆಮ್ಮ ತಂದೆ ಸಂಗಾಲು ತಿಮ್ಮಪ್ಪ ಬದಲಾಗಿ ಸಂಗಾಲು ಮಾರೆಮ್ಮ ತಂದೆ ಸಂಗಾಲು ತಿಮ್ಮಪ್ಪ ಎಂದು ನಮೂದಿಸುವಂತೆ ಕೋರಿರುತ್ತಾರೆ

ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ , ಕಂದಾಯ ನಿರೀಕ್ಷಕರ ಸದರಿ ಹಕ್ಕುಬದಲಾವಣೆ ದಾಖಲೆಯು ಸರಿಯಿದ್ದು,ನೊಂದಾಯಿತ ಕ್ರಯ ವ್ಯವಹಾರವೇ ಸಂಗನಕಲ್ಲು ಮಾರೆಮ್ಮ ಎಂದು ನಮೂದಾಗಿ ನೆಡೆದಿರುತ್ತದೆ ಹಾಗಾಗಿ ಪಹಣಿಯಲ್ಲಿ ಸಂಗನಕಲ್ಲು ಮಾರೆಮ್ಮ ಎಂದು ನಮೂದಾಗಿರುತ್ತದೆ. ಈ ವಿವರಗಳ ಹಿನ್ನೆಲೆಯಲ್ಲಿ ಸದರಿ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.